ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಈಗ ಇನ್ನು 25 ರೂಪಾಯಿಗಳಿಂದ ಜಾಸ್ತಿ ಮಾಡಬೇಕು ಎಂದು ಹೇಳಿದ್ದಾರೆ, ಅದಕ್ಕೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಈಗ ಜಾಸ್ತಿ ಮಾಡಿದ್ದೇವೆ. ಇದರ ಪ್ರಕ್ರಿಯೆ ಯಾವರೀತಿ ಬರುತ್ತದೆ ಎಂದು ನೋಡಿಕೊಂಡು ಅದನ್ನು ಕೂಡ ಪರಿಶೀಲನೆ ಮಾಡೋಣ. ಅಲ್ಲಿ ಕಟ್ಟಡಗಳ ದುರಸ್ತಿಯಾಗಬೇಕೆಂದು ಹೇಳಿದ್ದಾರೆ. ಯಾವ್ಯಾವುದು ದುರಸ್ತಿ ಆಗಬೇಕು ಎನ್ನುವುದನ್ನು ನಾವು ಪರಿಶೀಲನೆ ಮಾಡಿ ನೋಡೋಣ. ಅಲ್ಲಿ ಇರತಕ್ಕಂಥ ಪೋಸ್ಟನ್ನು ಫಿಲಪ್ ಮಾಡಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಅದರ ಬಗ್ಗೆ ಸಹ ನೋಡೋಣ. ಈಗ ನಮ್ಮ ಇಲಾಖೆಯಲ್ಲಿ ನಮ್ಮ ಸರ್ಕಾರದ ನೀತಿ ಶೇಕಡ 5ರಷ್ಟು ಸಿಬ್ಬಂದಿಯನ್ನು ಕಡಿಮೆ ಮಾಡಬೇಕು ಎನ್ನುವಂತಹ ವಿಚಾರಕ್ಕೆ ಸರ್ಕಾರ ಬದ್ಧವಾಗಿದೆ. ಕೆಲವು ಇಲಾಖೆಯಲ್ಲಿ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ, ಆರೋಗ್ಯ ಇಲಾಖೆಯಲ್ಲಿ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ. ಯಾವ ಇಲಾಖೆಯಲ್ಲಿ ಕಡಿಮೆ ಮಾಡಬೇಕು ಎನ್ನುವುದೂ ಸಹ ಮೇಲ್ಮಟ್ಟದ ಅಧಿಕಾರಿಗಳ ಮಟ್ಟದಲ್ಲಿ ಪರಿಶೀಲನೆ ನಡೆಯುತ್ತಿದೆ. ಅದನ್ನು ಸಹ ನಾವು ಗಮನಕ್ಕೆ ತೆಗೆದುಕೊಂಡು ಎಲ್ಲಿ ಸ್ಕೆಲಿಟನ್ ಸ್ಟಾಫ್ ಇದೆ ಎನ್ನುವುದನ್ನು ನೋಡಿಕೊಂಡು ಎಲ್ಲಿ ಕೊಡುವುದಕ್ಕೆ ಸಾಧ್ಯವಿದೆ, ಅಲ್ಲಿಗೆ ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ.

ಮುಧೋಳ ತಾಲ್ಲೂಕಿನ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು

578 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಧೋಳ ತಾಲ್ಲೂಕಿನ ಸುಮಾರು 11 ಗ್ರಾಮಗಳಲ್ಲಿ ಸ್ಮಶಾನ (ರುದ್ರಭೂಮಿ) ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು?*

ಇ) *ಯಾವಾಗ ಸ್ಮಶಾನಕ್ಕೆ ಭೂಮಿಯನ್ನು ಮಂಜೂರು ಮಾಡುಲಾಗುವುದು ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ರಾಜ್ಯದಲ್ಲಿರುವ ಅಗತ್ಯ ಸ್ಮಶಾನಕ್ಕಾಗಿ ರುದ್ರಭೂಮಿ ಸೌಲಭ್ಯ ಕಲ್ಪಿಸಲು ಖಾಸಗಿ ಭೂಮಾಲೀಕರಿಂದ ಜಮೀನನ್ನು ನೇರವಾಗಿ ಕೊಂಡುಕೊಳ್ಳುವ ಕುರಿತು ಸರ್ಕಾರದಿಂದ ಆದೇಶ ಸಂಖ್ಯೆ:ಕಂಇ 185 ಭೂಸ್ವಾವ್ಯಾ 92 ದಿನಾಂಕ 20-10-95 ರಂದು ಹೊರಡಿಸಿದೆ. ಸಂಬಂಧಿಸಿದ ವಿಭಾಗಾಧಿಕಾರಿಗಳಿಗೆ ಈ ಉದ್ದೇಶಕ್ಕಾಗಿ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಆದೇಶದ ಪ್ರಕಾರ ಭೂಮಾಲಿಕರು ಅವರುಗಳ ಜಮೀನನ್ನು ಮಾರಾಟ ಮಾಡಲು ಒಪ್ಪದಿದ್ದಲ್ಲಿ ಭೂಸ್ವಾಧೀನ ಕಾಯ್ದೆ ತುರ್ತು ವಿಧಿ ಕಲಂ 17 ರನ್ವಯ ಭೂಸ್ವಾಧೀನಕ್ಕೆ ಒಳಪಡಿಸಿ ಅತ್ಯಲ್ಪ ಕಾಲಾವಾಕಾಶದಲ್ಲಿ

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಆದೇಶಿಸಿದೆ. ಈ ದಿಶೆಯಲ್ಲಿ 1997ರ ಜುಲೈ ತಿಂಗಳಲ್ಲಿ ಎಲ್ಲಾ ವಿಭಾಗಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿ ಭೂಮಾಲೀಕರಿಂದ ಜಮೀನನ್ನು ಖರೀದಿಸಿ ಸ್ಮಶಾನಕ್ಕಾಗಿ ಒದಗಿಸಲು ಒಂದು ವಿಶೇಷ ಕಾರ್ಯಯೋಜನೆಯನ್ನು ಕೈಗೆತ್ತಿಕೊಂಡು ಕ್ರಮ ಜರುಗಿಸುವಂತೆ ತಿಳಿಸಲಾಗಿದೆ. ಇದರಂತೆ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಲು ಅಧಿಕಾರ ಹೊಂದಿದ್ದಾರೆ. ಮೇಲ್ಕಂಡ ಆದೇಶದನ್ವಯ ಮುಧೋಳ ತಾಲ್ಲೂಕಿನ 11 ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಭೂಸ್ವಾಧೀನ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೇ, ಉತ್ತರ ಮಾಮೂಲಾಗಿದೆ. ಉಂಡವರು ಏನು ಬಲ್ಲರು ಉಪವಾಸ ಇದ್ದವರ ಸ್ಥಿತಿ ಎಂದು ಗಾದೆ ಇದೆ. ಆ ತರಹ ಇದೆ.

ಅಧ್ಯಕ್ಷರು : ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ : ಹೇಳುತ್ತೇನೆ, ನನ್ನ ತಾಲ್ಲೂಕಿನಲ್ಲಿ 11 ಗ್ರಾಮಗಳಲ್ಲಿ ಸ್ಮಶಾನಕ್ಕೆ ಭೂಮಿ ಇಲ್ಲ. ಈಗ ಎರಡೂವರೆ ವರ್ಷಗಳಿಂದ 20 ಕಾಗದಗಳನ್ನು ಸರ್ಕಾರಕ್ಕೆ ಬರೆದಿದ್ದೇನೆ. ಆದರೆ ಅದೇ ಉತ್ತರ ಪರಿಶೀಲಿಸುತ್ತೇವೆ, ಭೂಸ್ವಾಧೀನ ಮಾಡಿಸಿಕೊಳ್ಳುತ್ತೇವೆ. ಇದನ್ನೇ ಹೇಳುತ್ತಾರೆಯೇ ಹೊರತು ಇವತ್ತಿನವರೆಗೂ ಆ ಕೆಲಸ ಆಗಿಲ್ಲ. 11 ಗ್ರಾಮೀಣ ಹೆಸರು ತಮಗೆ ಹೇಳುತ್ತೇನೆ. ಕುಳಲಿ, ಬುದ್ನಿ, ಸೈದಾಪುರ್, ಕೆಸರುಗೊಪ್ಪ, ಬಿಸ್ನಾಲ್, ಶಿರೋಳ್, ನಾಲಾಪುರ್, ಎಡೇಹಳ್ಳಿ, ದವಳೇಶ್ವರ, ರಂಜನಗಿ, ಸಂಗಾಮಟ್ಟ. ಇನ್ನೊಂದು ನಮ್ಮ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಅದು ಸಮೀರ್‌ವಾಡಿಯಲ್ಲಿ. ಸೈದಾಪುರದಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆ ಇದೆ. ಅದರಲ್ಲಿ ಏನು ಜಮೀನು ಖರೀದಿ ಮಾಡಿದ್ದಾರೆ ಅದನ್ನೆಲ್ಲಾ ಇಂಡಸ್ಟ್ರೀಯಲ್ ಪರ್ಪಸ್‌ನಿಂದಲೇ ಮಾಡಿದ್ದಾರೆ. ಅಗ್ರಿಕಲ್ಚರ್ ಲ್ಯಾಂಡ್ ಕನ್‌ವರ್ಷನ್ ಮಾಡಿ ನಾನ್ ಅಗ್ರಿಕಲ್ಚರ್ ಲ್ಯಾಂಡ್ ಎಂದು ಮಾಡಿದ್ದಾರೆ. ಅಲ್ಲಿ ಕೊಡುವುದಕ್ಕೆ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿರತಕ್ಕಂಥ ಸುಮಾರು ಎರಡೂವರೆ ಸಾವಿರ ಜನರಿಗೆ ಸ್ಮಶಾನದ ತೊಂದರೆ ಇದೆ. ಅವರು ಸತ್ತಾಗ ಏನು ಮಾಡುತ್ತಾರೆಂದರೆ ಕೆನಾಲ್ ದಂಡೆಗುಂಟ ಹುಗಿಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸ್ಮಶಾನಕ್ಕೆ ಜಾಗ ಇಲ್ಲದೇ ಇರುವುದೇ ಕಾರಣವಾಗಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಯಾವರೀತಿ ತಾವು ಭೂಸ್ವಾಧೀನ ಮಾಡಿಕೊಳ್ಳುತ್ತೀರಿ? ಇಂಡಸ್ಟ್ರಿಯಲ್ ಪರ್ಪಸ್‌ಗೆ ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ತಾವು ಉತ್ತರ ಕೊಟ್ಟಿದ್ದೀರಿ. ಕಾನೂನಿಗೆ ಏನಾದರೂ ತಿದ್ದುಪಡಿ ತಂದು ಮಾಡುತ್ತೀರಾ? ಎರಡನೆಯದಾಗಿ, ಸರ್ಕಾರ ಏನು ಬೆಲೆ ನಿಗದಿ ಮಾಡಿದೆ ಆ ಬೆಲೆಗೆ ಮುಧೋಳ ತಾಲ್ಲೂಕಿನಲ್ಲಿ ಜಮೀನು ಸಿಗುವುದಿಲ್ಲ. ಒಂದೂವರೆ ಎರಡು ಲಕ್ಷ ರೂಪಾಯಿಗಳವರೆಗೆ ಇವತ್ತು ಮಾರ್ಕೆಟ್ ಬೆಲೆ ಇದೆ. ಆ ಬೆಲೆಗೆ ತಾವು ಖರೀದಿ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಎಷ್ಟು ದಿನದಲ್ಲಿ ಮಾಡುತ್ತೀರಿ? ಅದಕ್ಕೆ ನಿರ್ದಿಷ್ಟವಾದಂತಹ ಉತ್ತರ ಬೇಕು. ಕೇವಲ ನಾವು ಮಾಡುತ್ತೇವೆ, ನೋಡುತ್ತೇವೆ ಎಂದರೆ ಆಗುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಸ್ಮಶಾನಕ್ಕೆ ಬೇಕಾದಂತಹ ಜಮೀನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇದೆ. ಎಲ್ಲಾ ಡಿವಿಜನಲ್ ಕಮಿಷನರುಗಳಿಗೆ ಈಗಾಗಲೇ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿ ರೈತರು ಸ್ಮಶಾನಕ್ಕೆ ಜಾಗವನ್ನು ಕೊಡುವುದಕ್ಕ ಮುಂದೆ ಬರುತ್ತಾರೆ, ಅಲ್ಲಿ ರೊಕ್ಕ ಕೊಟ್ಟು ಖರೀದಿ ಮಾಡುತ್ತಾರೆ. ಎಲ್ಲಿ ರೈತರು ಜಾಗ ಕೊಡುವುದಿಲ್ಲ ಅಲ್ಲಿ ಎಮರ್ಜೆನ್ಸಿ ಕ್ಲಾಸ್ ಒಂದು ಇದೆ, ಸೆಕ್ಷನ್ 17ರ ಪ್ರಕಾರ ಎಮರ್ಜೆನ್ಸಿ ಕ್ಲಾಸ್ ಹಾಕಿ ಅಲ್ಲಿ ಅಕ್ವಿಜಿಷನ್ ಮಾಡಬೇಕು ಎಂದು ಒಂದು ಸೂಚನೆ ಇದೆ. 1997ರ ಜುಲೈನಲ್ಲಿ ಪೂನಃ ಎಲ್ಲರಿಗೂ ಒಂದು ಸುತ್ತೋಲೆಯನ್ನು ಕಳುಹಿಸಿ, ಇದು ಒಂದು ವಿಶೇಷ ಕಾರ್ಯಕ್ರಮ ಎಂದು ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಿದ್ದೇವೆ. ರಾಜ್ಯದಲ್ಲಿ ಎಲ್ಲಿ ಸ್ಮಶಾನ ಇಲ್ಲ ಅಲ್ಲಿ ಸ್ಮಶಾನಕ್ಕೆ ಜಾಗ ಕೊಡಬೇಕೆಂದು ಒಂದು ವಿಶೇಷವಾದ ಯೋಜನೆಯನ್ನು ಕೈಗೆತ್ತಿಕೊಂಡು ಕೆಲಸ ಮಾಡಿ ಎಂದು ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಸೈದಾಪುರದ ವಿಚಾರವಾಗಿ ಹೇಳುತ್ತಾರೆ, ಸಮೀರ್‌ವಾಡಿಯಲ್ಲಿ ಎಲ್ಲಾ ಇಂಡಸ್ಟ್ರೀಯಲ್ ಪರ್ಪಸ್‌ಗೆ ಕನ್‌ವರ್ಷನ್ ಆಗಿದೆ. ಅಲ್ಲಿ ಸ್ಮಶಾನಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಹೌದು ನಾವು ಆ ರೀತಿ ಹೇಳಿದ್ದೇವೆ. ಆದರೆ ಕಾನೂನಿನ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಈಗ ಕೂಡ

11.10 ಎ.ಎಂ.

ಸನ್ಮಾನ್ಯ ಸದಸ್ಯರಾದ ಕಾರಜೋಳ ಅವರು ಅಲ್ಲಿ ಸ್ಮಶಾನಕ್ಕೆ ಜಾಗ ಇಲ್ಲದೆ ಇರುವುದರಿಂದ ಸ್ಮಶಾನಕ್ಕಾಗಿ ಜಾಗ ಕೊಡಿಸಿ ಎಂದು ಕೇಳಿದ್ದಾರೆ. ಸೈದಾಪುರ ಗ್ರಾಮದಲ್ಲಿ ಸ್ಮಶಾನಕ್ಕೆ ಜಾಗ ಕೊಡಿಸುವ ಬಗ್ಗೆ ಕಾನೂನಿನಲ್ಲಿ ಯಾವ ರೀತಿ ಅವಕಾಶ ಇದೆಯೆಂದು ನೋಡುತ್ತೇನೆ. ಒಂದು ಪಕ್ಷ ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೆ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆ. ಆ ಮೇಲೆ ಅವರು ಹೇಳಿರತಕ್ಕಂತಹ 11 ಹಳ್ಳಿಗಳಿಗೆ ಸ್ಮಶಾನಕ್ಕಾಗಿ ಭೂಮಿಯನ್ನು ಯಾವಾಗ ಕೊಡಲಾಗುವುದೆಂದು ನಿರ್ದಿಷ್ಟವಾದ ತಾರೀಖನ್ನು ಹೇಳಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಇಂತಿಷ್ಟು ತಾರೀಖಿನೊಳಗೆ ಇದನ್ನು ಮಾಡಿ ಕೊಡಲಾಗುತ್ತದೆಂದು ಹೇಳಲು ಕಷ್ಟವಾಗುತ್ತದೆ. ಎಷ್ಟು ಸಾಧ್ಯವಿದೆಯೋ ಅಷ್ಟು ಬೇಗ ಆದ್ಯತೆಯ ಮೇರೆಗೆ ನಾನು ಮಾಡಿಕೊಡುತ್ತೇನೆ. ಆ ಮೇಲೆ ಅಲ್ಲಿ ಮುಧೋಳ್‌ನ ತಾಲ್ಲೂಕಿನಲ್ಲಿ ಜಮೀನಿನ ಬೆಲೆ ಜಾಸ್ತಿ ಇದ್ದು ಅದಕ್ಕೆ ಸರ್ಕಾರ ಕೊಡತಕ್ಕಂತಹ ರೊಕ್ಕ ಬಹಳ ಕಡಿಮೆ ಇದೆಯೆಂದು ಹೇಳಿದ್ದಾರೆ. ಮುಧೋಳ್ ತಾಲ್ಲೂಕಿನಲ್ಲಿ ಒಂದು ಎಕರೆಗೆ 2 ಲಕ್ಷ ರೂ. ಬೆಲೆ ಇದೆ. ಅಷ್ಟು ಹಣವನ್ನು ಕೊಟ್ಟು ಕೊಂಡುಕೊಳ್ಳುವುದಕ್ಕೆ ಕಷ್ಟವಾದರೂ ಕೂಡ ನಾವು ಎಮರ್‌ಜೆನ್ಸಿ ಕ್ಲಾಸ್ ಹಾಕಿ ಅದನ್ನು ಅಕ್ವೈರ್ ಮಾಡಿಕೊಡುತ್ತೇನೆ.

ಶ್ರೀ ಹೆಚ್ ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ, ಆದರೆ ದುರಾದೃಷ್ಟ ನನ್ನ ಪ್ರಶ್ನೆ ಸ್ಟಾರ್ಡ್ ಆಗಿಬರಲಿಲ್ಲ. ಇದುವರೆಗೂ ಆ ಪ್ರಶ್ನೆ ಏನಾಯಿತು ಎಂದು ಗೊತ್ತಿಲ್ಲ. ಇದರಿಂದಾಗಿ ನಮ್ಮ ಸ್ಟಾರ್ ಈಡ್ಯೂರೇಷನ್‌ನಲ್ಲಿ ಸರಿ ಇದ್ದ ಹಾಗೆ ಕಾಣುವುದಿಲ್ಲ;

ಅಧ್ಯಕ್ಷರು : ಅದೆಲ್ಲಾ ಬ್ಲೂಸ್ಟಾರ್ ಆಗಿ ಹೋಗಿದೆ.

ಶ್ರೀ ಹೆಚ್. ಶಿವಪ್ಪ : ಈಗ ಕೊನೆಯ ಪಕ್ಷ ಸತ್ತಾಗಲಾದರೂ 3 ಅಡಿ ಜಾಗ ಕೊಡಲಿಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ದೊಡ್ಡ ಸಮಸ್ಯೆ ಎಲ್ಲಾ ಕಡೆ ಇದೆ. ಯಾವ ಯಾವ ಗ್ರಾಮದಲ್ಲಿ ಸ್ಮಶಾನಕ್ಕೆ ಜಾಗ ಇಲ್ಲ ಎಂಬ ಬಗ್ಗೆ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಂದಾಗಲಿ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಂದಾಗಲಿ ತರಿಸಿಕೊಂಡು ಅದರ ಬಗ್ಗೆ ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ನೀತಿಯನ್ನು ರೂಪಿಸುತ್ತೀರಾ? ಎಲ್ಲಾ ಕಡೆನೂ ಯೂನಿಫಾರ್ಮ್ ಆಗಿ ಹಣಕೊಟ್ಟು ಕೊಂಡುಕೊಳ್ಳಬೇಕೆಂದರೆ ಜಾಗ ಸಿಗುವುದಿಲ್ಲ. ಇದರ ಬಗ್ಗೆ ಒಂದು ವಿಶೇಷವಾದ ಕಾರ್ಯಕ್ರಮವನ್ನೇ ಸರ್ಕಾರ ಕೈಗೆತ್ತಿಕೊಳ್ಳಬೇಕು. ನಮ್ಮ ತಾಲ್ಲೂಕಿನ ಹಳ್ಳಿಗಳಲ್ಲಿ ಹೆಣವನ್ನು ಹೂಳಲು ಜಾಗವಿಲ್ಲದೆ ಹೊಳೆಗೆ ಹಾಕುತ್ತಾರೆ. ಸ್ಮಶಾನಕ್ಕೆ ಜಾಗ ಕೊಡಿಸುತ್ತೇವೆಂದು ನಾವು ಚುನಾವಣೆಯ ಸಂದರ್ಭದಲ್ಲಿ ಭರವಸೆಯನ್ನು ಕೊಟ್ಟು ಈಗ ಅಲ್ಲಿಗೆ ಹೋಗದಿರುವ ಹಾಗೆ ಆಗಿದೆ. ಆದ್ದರಿಂದ ಇದರ ಬಗ್ಗೆ ದಯವಿಟ್ಟು ತತ್‌ಕ್ಷಣ ಸಂಬಂಧಪಟ್ಟ ಅಧಿಕಾರಿಗಳಿಂದ ಅಂಕಿಅಂಶಗಳನ್ನು ತರಿಸಿ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ರಮೇಶ್. ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಶಿವಪ್ಪನವರು ಹೇಳಿದ್ದರಲ್ಲಿ ಅಸತ್ಯವೇನಿಲ್ಲ. ಇದು ಸತ್ಯವಾದ ಮಾತು. ಜುಲೈ 1997ರಲ್ಲಿ ನಾವು ಒಂದು ತೀರ್ಮಾನ ಮಾಡಿ ಇದು ಒಂದು ವಿಶೇಷ ಕಾರ್ಯಕ್ರಮ, ವಿಶೇಷ ಆಂಧೋಳನದ ತರಹ ಮಾಡಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೇನೆ. ಸ್ವಲ್ಪ ಸಮಯಾವಕಾಶ ಕೊಡಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪುನಃ ಒಂದು ವರದಿಯನ್ನು ತರಿಸಿ ಎಲ್ಲೆಲ್ಲಿ ಅತ್ಯಂತ ಅವಶ್ಯಕವಾಗಿ ಸ್ಮಶಾನಗಳಿಗೆ ಜಾಗ ಬೇಕೋ ಅದನ್ನು ಮಾಡುತ್ತೇನೆ. ನಾನು ಬಹಳ ನೋವಿನಿಂದ ಹೇಳುವುದೇನೆಂದರೆ ಜನಗಳು ಯಾರಯಾರದೋ ಜಮೀನನ್ನು ಒತ್ತುವರಿ ಮಾಡುತ್ತಾರೆ. ಬೈರೇಗೌಡರದ್ದು, ರಮೇಶ್ ಜಿಗಜಿಣಗಿದ್ದು ಬೇಕಾದರೆ ಮಾಡಲಿ. ಸಮಾಜದೊಳಗೆ ಸ್ಮಶಾನವನ್ನೇ ಒತ್ತುವರಿ ಮಾಡುತ್ತಾರಲ್ಲಾ. ಎಂತಹ ದುರಾದೃಷ್ಟ ನಮ್ಮದು. ರಾಜ್ಯದಲ್ಲಿ ಎಲ್ಲೆಲ್ಲಿ ಸ್ಮಶಾನವನ್ನು ಒತ್ತುವರಿ ಮಾಡಿದ್ದಾರೋ? ಅವರು ಯಾರೇ ದೊಡ್ಡವರಾಗಿರಲಿ, ಸಣ್ಣವನಾಗಿರಲಿ, ಅಂತಹವರುಗಳನ್ನು ಕಿತ್ತು ಬಿಸಾಕಿ ಎಂದು ಈಗಾಗಲೇ ನಮ್ಮ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಅಪ್ಪಚ್ಚುರಂಜನ್‌ರವರೇ, ನಿಮ್ಮ ಪ್ರಶ್ನೆಗೆ ಉತ್ತರಿಸಲು ಸರ್ಕಾರದವರು ಸಮಯವನ್ನು ಕೇಳಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್: ಸನ್ಮಾನ್ಯ ಅಧ್ಯಕ್ಷರೆ, ಆ ಪ್ರಶ್ನೆಯನ್ನು ಓದಿ ನೋಡಿ. ಅಧ್ಯಕ್ಷರೆ, ನಾನು ಕೇಳಿರುವಂತಹ ಪ್ರಶ್ನೆ ಬಹಳ ಸಿಂಪಲ್ ಆಗಿದೆ.

ಅಧ್ಯಕ್ಷರು : ಈ ಅಧಿವೇಶನದಲ್ಲಿ ನಾನು ತರಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳಾದಂತಹ ಬೈರೇಗೌಡರು, ಎಂ.ಸಿ. ನಾಣಯ್ಯನವರು, ಅಜಯ್‌ಕುಮಾರ್ ಸರನಾಯಕ್‌ರವರು ಒಂದೂವರೆ ವರ್ಷದ ಹಿಂದೆ ಬಂದಿದ್ದರು.

ಅಧ್ಯಕ್ಷರು : ಈ ಅಧಿವೇಶನದಲ್ಲೇ ತರಿಸಿಕೊಡುತ್ತೇನೆ.